ಶ್ರೀಮತಿ ಪಂನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ದಿನಾಂಕ. ೨೩–೫–೧೯೮೮. ಒಟ್ಟು ಸದಸ್ಯರ ಸಂಖ್ಯೆ. ೧೨.

ಆ) ಇಲ್ಲ.

ಇ) ಯಾವುದೂ ಇಲ್ಲ.

ಈ)

	೧೯೮೭–೮೮	೧೯೮೮–೮೯
	೧,೬೦,೧೦,೦೩೩–೦೦	೮೩,೮೦,೨೦೬–೦೦

ಉ)

ಸಿಬ್ಬಂದಿ	೧೯೮೭–೮೮	೧೯೮೮–೮೯
ವೆಚ್ಚ	೨,೩೦,೫೨೫–೦೦	೨,೪೮,೧೮೬–೦೦
ಇತರೆ ವೆಚ್ಚ	೩,೩೯,೭೯೫–೦೦	೧,೭೩,೧೭೭–೦೦

ಶ್ರೀಮತಿ ಪಂನೋರಮಾ ಮಧ್ವರಾಜ್.—ವಂಊರನೇ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರವನ್ನು ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬೇಕಾಗಿದೆ. ೨ ಮೀಟಿಂಗ್ ಆಗಿದೆ.

ಶ್ರೀ ಚೌಡಾರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕಿಂ ಟಿ. ಎ. ಪಿ. ಸಿ. ಎಂ. ಸಮಿತಿಯನ್ನು ೬–೯–೧೯೮೮ರಲ್ಲಿ ಅವ್ಯವಹಾರ ನಡೆದಿದೆ ಎಂದಂ ಸರ್ಕಾರದವರಂ ಪರಿಶೀಲನೆ ಮಾಡಿ ಸೂಪರ್‌ಸೀಡ್ ಮಾಡಲಾಗಿತ್ತು. ಸೂಪರ್ ಸೀಡ್ ಮಾಡಿ ೧೫ ದಿವಸದೊಳಗೆ ಮತ್ತೆ ಅದೇ ಕಮಿಟಿಯವರು ಕೆಲಸ ನಿರ್ವಹಿಸುವಂತೆ ಆದೇಶ ಕೊಟ್ಟಿರುತ್ತಾರೆ. ಈ ವಿಚಾರದಲ್ಲಿ ನಾನು ರಾಜ್ಯಪಾಲರಿಗೆ, ಮಂತ್ರಿಗಳಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದರೂ ಅವರಿಂದ ಉತ್ತರ ಬಂದಿಲ್ಲ. ಕೋರಂ ಕೂಡ ಇಲ್ಲದೆ ಮೀಟಿಂಗ್ ನಡೆಸುತ್ತಾರೆ, ಜೊತೆಗೆ ಬಹಳ ಬೆಲೆ ಬಾಳುವ ಕಟ್ಟಡ ಗಳನ್ನು ಬೇರೆಯವರಿಗೆ ಕೊಡುತ್ತಿದ್ದಾರೆ. ಕೂಡಲೇ ಸರ್ಕಾರ ಈ ಸಮಿತಿಯನ್ನು ಸೂಪರ್ ಸೀಡ್ ಮಾಡುವುದೇ ?

ಶ್ರೀಮತಿ ಪಂನೋರಮಾ ಮಧ್ವರಾಜ್.—ಸೂಪರ್ ಸೀಡ್ ಮಾಡಿಸುತ್ತೇನೆ.

ಸಹಕಾರ ಸಂಘಗಳ ಸಾಲ ಮನ್ನಾ ಕುರಿತು

೩೭೪. ಶ್ರೀ ದಿವಟರ್ ಮಲ್ಲಿಕಾರ್ಜುನ ಬಸಪ್ಪ (ಕೊಪ್ಪಳ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರ ೧೯೮೩–೮೪ ಹಾಗೂ ೧೯೮೭–೮೮ರಲ್ಲಿ ದೀರ್ಘಾವಧಿ ಹಾಗು ಅಲ್ಪಾವಧಿ ಸಾಲಗಳ ಮೇಲೆ ನೀಡಿದ ಬಡ್ಡಿ ರಿಯಾಯಿತಿಯ ಮೊತ್ತವೆಷ್ಟು ?

ಆ) ಸರ್ಕಾರದವರಂ ಹಣವನ್ನು ಆಯಾ ಸಹಕಾರ ಸಂಘಗಳಿಗೆ ಪಾವತಿ ಮಾಡಿರುವರೆ ? ಹಾಗಿದ್ದಲ್ಲಿ ಅವರ ಮೊತ್ತವೆಷ್ಟು ?

ಇ) ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡುವ ರೈತರಿಗೆ ಪ್ರತಿಶತ ೭ ರೂ.ಗಳ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ಸರ್ಕಾರದವರು ಮುಂದುವರೆಸುವರೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು),—

ಅ) ಸರ್ಕಾರವು ೧೯೮೩-೮೪ ಹಾಗೂ ೧೯೮೨-೮೪ನೇ ಸಾಲುಗಳಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮಧ್ಯಮಾವಧಿ (ಪರಿವರ್ತಿತ) ಮತ್ತು ದೀರ್ಘಾವಧಿ ಸಾಲಗಳ ಮೇಲೆ ನೀಡಿದ ಬಡ್ಡಿ ರಿಯಾಯಿತಿ ಮೊತ್ತದ ವಿವರಗಳು ಈ ರೀತಿ ಇರುತ್ತವೆ.

(ಲಕ್ಷ ರೂ. ಗಳಲ್ಲಿ)

ಕ್ರಮ ಸಂಖ್ಯೆ	ವರ್ಷ	ಅಲ್ಪಾವಧಿ, ಮಧ್ಯಮಾವಧಿ ಮಧ್ಯಮಾವಧಿ (ಪರಿವರ್ತಿತ)	ದೀರ್ಘಾವಧಿ	ಒಟ್ಟು
೧	೧೯೮೩-೮೪	೧೦೨೯.೯೬	೪೦೮.೦೦	೧೫೩೬.೯೭
೨	೧೯೮೨-೮೪	೬೬೨೫.೫೭	೩೦೪೪.೦೦	೯೬೬೯.೫೭
	ಒಟ್ಟು	೭೭೫೪.೫೩	೩೪೨೨.೦೦	೧೧೦೭೬.೫೪

ಆ) ೧೯೮೩-೮೪ನೇ ಸಾಲಿನ ಬಾಬ್ತು ೧೫೩೬.೯೭ ಲಕ್ಷ ರೂ.ಗಳನ್ನು ಪೂರ್ಣವಾಗಿ ಬಿಡುಗಡೆ ಮಾಡಲಾಗಿರುತ್ತದೆ. ೧೯೮೨-೮೪ನೇ ಸಾಲಿನ ಬಾಬ್ತು ದೀರ್ಘಾವಧಿ ಸಾಲಗಳ ಮೇಲೆ ನೀಡಬೇಕಾಗಿದ್ದ ೩೦೪೪.೦೦ ಲಕ್ಷ ರೂ.ಗಳನ್ನು ಸಹ ಸರ್ಕಾರವು ಪೂರ್ಣವಾಗಿ ಬಿಡುಗಡೆ ಮಾಡಿರುತ್ತದೆ. ಈ ಸಾಲಿನ ಬಾಬ್ತು ಅಲ್ಪಾವಧಿ, ಮಧ್ಯಮಾವಧಿ, ಮಧ್ಯಮಾವಧಿ (ಪರಿವರ್ತಿತ) ಸಾಲಗಳ ಬಗ್ಗೆ ನೀಡಬೇಕಾಗಿದ್ದ ೬೬೨೫.೫೭ ಲಕ್ಷ ರೂ.ಗಳ ಪೈಕಿ ೨೯೨೮.೮೧ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಹಾಗಾಗಿ ೧೯೮೨-೮೪ನೇ ಸಾಲಿನ ಬಾಬ್ತು ಒಟ್ಟು ಬಡ್ಡಿ ಸಹಾಯಧನ ಮೊತ್ತ ೫೯೪೨.೮೧ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಇ) ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ಸಹಾಯಧನ ಒದಗಿಸುವ ಒಂದು ಹೊಸ ಯೋಜನೆಯನ್ನು ದಿನಾಂಕ ೨-೧೦-೮೪ ರಿಂದ ಜಾರಿಗೆ ಬರುವಂತೆ ಕಾರ್ಯಗತಗೊಳಿಸಲು ಸರ್ಕಾರ ಉದ್ದೇಶಿಸಲಾಗಿದೆ.

೨-೫೦ ಪಿ.ಎಂ.

ಶ್ರೀ ಎಂ. ಬಿ. ದಿವಟರ್.—೧೯೮೩-೮೪ನೇ ಸಾಲಿನಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳ ಒಟ್ಟು ಹಣ ೧೫೩೬.೯೭ ಲಕ್ಷ ರೂಪಾಯಿಗಳು. ಈ ಹಣವನ್ನು ಪೂರ್ಣವಾಗಿ ಪಾವತಿ ಮಾಡಿರುವುದಾಗಿ ತಿಳಿಸಲಾಗಿದೆ. ೧೯೮೨-೮೪ನೇ ಸಾಲಿನಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಒಟ್ಟು ಹಣ ೬೬೨೫ ಲಕ್ಷ ರೂಪಾಯಿಗಳು, ದೀರ್ಘಾವಧಿ ಸಾಲ ೩೦೪೪ ಲಕ್ಷ ರೂಪಾಯಿಗಳು, ಒಟ್ಟು ೯೬೬೯.೫೭ ಲಕ್ಷ ರೂಪಾಯಿಗಳ ಬಡ್ಡಿ ರಿಯಾಯಿತಿ ಕೊಡಲಾಗಿದೆ. ಇದರಲ್ಲಿ ದೀರ್ಘಾವಧಿ ೩೦೪೪ ಲಕ್ಷ ರೂಪಾಯಿಗಳನ್ನು ಪೂರ್ಣವಾಗಿ ತುಂಬಲಾಗಿದೆ. ಅಲ್ಪಾವಧಿ ೬೬೨೫ ಲಕ್ಷ ರೂಪಾಯಿಗಳ ಪೈಕಿ ೨೯೨೮.೮೧ ಲಕ್ಷ ರೂಪಾಯಿಗಳನ್ನು ಸರ್ಕಾರ ಪಾವತಿ ಮಾಡಿರುವುದಾಗಿ ತಿಳಿಸಿದ್ದಾರೆ. ಆದರೆ ಇನ್ನೂ ೩,೬೯೬.೭೪ ಲಕ್ಷ ರೂಪಾಯಿಗಳನ್ನು ಸರ್ಕಾರ ಪಾವತಿ ಮಾಡಬೇಕಾಗಿದೆ. ಇದನ್ನು ಎಷ್ಟು ದಿವಸದಲ್ಲಿ ಸರ್ಕಾರಕ್ಕೆ ಪಾವತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ, ರೈತರಿಗೆ ಸಾಲ ಮನ್ನಾ ಇದರಲ್ಲಿ ವೇವರ್ ಸರ್ಟಿಫಿಕೇಟ್ ಸಿಕ್ಕುತ್ತಿಲ್ಲ. ಆವರು ಹೊಸದಾಗಿ ಸಾಲ ಮಾಡಲಿಕ್ಕೆ ಬೇರೆ ಹಣಕಾಸಿನ ಸಂಸ್ಥೆಯವರು ಆವರಿಗೆ ಅವಕಾಶ ಮಾಡಿಕೊಡುತ್ತಿಲ್ಲ. ಆದ ಕಾರಣ, ಉಳಿದ ಹಣವನ್ನು ಸರ್ಕಾರ ಯಾವಾಗ ಪಾವತಿ ಮಾಡುತ್ತದೆ ಎನ್ನುವುದನ್ನು ತಿಳಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಸಭಾಧ್ಯಕ್ಷರೆ, ಈ ಒಂದು ಪ್ರಶ್ನೆಗೆ ಉತ್ತರ ಹೇಳ ಬೇಕೆಂದರೆ, ಸೆಪ್ಟೆಂಬರ್ ೧೯೮೦ರೊಳಗೆ ಈ ಹಣವನ್ನು ಪಾವತಿ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಎಂ. ಬಿ. ದಿವಟರ್.—ಇನ್ನೊಂದು ಪ್ರಶ್ನೆಯನ್ನು ಮಾನ್ಯ ಸಭಾಧ್ಯಕ್ಷರ ಮೂಲಕ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ರೈತರು ಈ ಸರ್ಕಾರದ ಮೇಲೆ ಸಾಕಷ್ಟು ಭರವಸೆಗಳನ್ನು ಇಟ್ಟುಕೊಂಡಿದ್ದಾರೆ. ಹೊಸ ಸರ್ಕಾರ ಬಂದ ಮೇಲೆ ಬಡ್ಡಿ ರಿಯಾಯಿತಿ ಕೊಡ